# ನಿರ್ಮಾಪಕಿ ಮೇಘನಾ!

**ಮಲಯಾಳಂ ಮತ್ತು ಕನ್ನಡ ಸಿನಿಮಾಗಳಲ್ಲಿ ಭಿನ್ನ ಪಾತ್ರಗಳ ಮೂಲಕ ಗುರ್ತಿಸಿಕೊಂಡಿರುವ ಮೇಘನಾ ರಾಜ್ ಇದೀಗ ನಿರ್ಮಾಣ ಕಾರ್ಯಕ್ಕೂ ಇಳಿಯುತ್ತಿದ್ದಾರೆ. ಧ್ರುವ ಸರ್ಜಾ ಮತ್ತು ಚಿರಂಜೀವಿ ಸರ್ಜಾ ಅವರನ್ನು ಇಟ್ಟುಕೊಂಡು ಒಂದು ಸಿನಿಮಾ ಮಾಡುವ ದೂರದಾಸೆಯೂ ಅವರ ಮನದಲ್ಲಿದೆ.**

■ ಪದ್ಮನಾಭ ಭಟ್



'ಪೊಗರು' ಸಿನಿಮಾ ಮುಗಿಯದೆ ಧ್ರುವ ಸರ್ಜಾ ಅವರನ್ನು ಮಾತಾಡಿಸುವ ಹಾಗಿಲ್ಲ. ಚಿರುವಂತೂ ಈಗಾಗಲೇ ಹತ್ತಾರು ಸಿನಿಮಾಗಳನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಇನ್ನೆರಡು ವರ್ಷ ಅವರಿಬ್ಬರ ಕಾಲ್‌ಶೀಟ್ ಸಿಗುವುದಿಲ್ಲ. ಹಾಗಾಗಿಯೇ ಮನೆಯಲ್ಲಿರುವ ಎರಡು ಮಕ್ಕಳನ್ನು ಬಿಟ್ಟು ಬೇರೆ ಮಕ್ಕಳನ್ನು ಇಟ್ಟುಕೊಂಡು ಸಿನಿಮಾ ಮಾಡ್ತಿದ್ದೇನೆ' ಎಂದು ತಮಾಷೆಯಾಗಿಯೇ ಹೇಳಿ ನಕ್ಕರು ಮೇಘನಾ ರಾಜ್. ಅಷ್ಟೇ ಹೇಳಿ ಸುಮ್ಮನಾಗಲಿಲ್ಲ, 'ನಾನು ಈಗಲೇ ಆಫರ್ ಮಾಡಿದ್ದೇನೆ. ಇನ್ನೆರಡು ವರ್ಷ ಬಿಟ್ಟಾದರೂ ಅಣ್ಣ–ತಮ್ಮ ಇಬ್ಬರನ್ನೂ ಹಾಕಿಕೊಂಡು ಒಂದು ಸೂಪರ್‌ಹಿಟ್ ಸಿನಿಮಾ ಮಾಡಿಯೇ ಮಾಡ್ತೀನಿ. ಅವರಿಬ್ಬರೂ ಇದುವರೆಗೆ ಒಟ್ಟಿಗೇ ನಟಿಸಿಲ್ಲ. ಅದು ನನ್ನ ಬ್ಯಾನರ್ ಸಿನಿಮಾದಲ್ಲಿಯೇ ಆಗಲಿ' ಎಂದು ಭರವಸೆಯನ್ನೂ ಕೊಟ್ಟರು.

ಇದುವರೆಗೆ ನಟಿಯಾಗಿಯಷ್ಟೇ ಗುರ್ತಿಸಿಕೊಂಡಿದ್ದ ಮೇಘನಾ ಈಗ ನಿರ್ಮಾಪಕಿಯಾಗುತ್ತಿದ್ದಾರೆ. ಹಾಸ್ಯನಟ ಪವನ್‌ಕುಮಾರ್ ನಿರ್ದೇಶಿಸುತ್ತಿರುವ 'ಪುಟಾಣಿ ಪಂಟರ್ಸ್' ಎಂಬ ಮಕ್ಕಳ ಸಿನಿಮಾಗೆ ಅವರು ಹಣ ಹೂಡುತ್ತಿದ್ದಾರೆ. ಇದು 'ಮೇಘನಾ ಸಿನಿಮಾಸ್'ನ ಮೊದಲ ಸಿನಿಮಾ.

ಮದುವೆಯಾದ ಮೇಲೆ ಅವಕಾಶಗಳು ಕಡಿಮೆಯಾಗಿ ನಿರ್ಮಾಣಕ್ಕಿಳಿಯುತ್ತಿದ್ದಾರೆ ಅಂದುಕೊಳ್ಳಬೇಡಿ. ಮೇಘನಾ ಅವರಿಗೆ ಈಗಲೂ ನಟನೆಯ ಕರೆಗಳು ಸಾಕಷ್ಟು ಬರುತ್ತಲೇ ಇವೆ. ಇತ್ತೀಚೆಗಷ್ಟೇ ಸೃಜನ್ ಲೋಕೇಶ್ ಅವರ ಸಿನಿಮಾವೊಂದರಲ್ಲಿ ನಾಯಕಿಯಾಗಿ ನಟಿಸಲು ಸಹಿ ಹಾಕಿದ್ದಾರೆ. ಮೊಬೈಲ್‌ನಿಂದ ಆಗುವ ಅವಾಂತರಗಳನ್ನು ನಗೆಯುಕ್ಕಿಸುವ ಧಾಟಿಯಲ್ಲಿ ದಾಟಿಸುವ ಸಿನಿಮಾದಲ್ಲಿ ಅವರು ಹೊಸಬಗೆಯ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ.

ಮದುವೆಯಾದ ಮೇಲೆ ನಿಮಗೆ ಬರುವ ಅವಕಾಶಗಳು ಕಡಿಮೆ ಆಗಿವೆಯೇ ಎಂದು ಕೇಳಿದರೆ 'ಮದುವೆಯಾದ ಮೇಲೆ ನಟಿಯರ ವೃತ್ತಿಬದುಕು ಮುಗಿಯಿತು ಎಂಬ ಮನೋಭಾವ ಮೊದಲೂ ಇರಲಿಲ್ಲ. ಆರತಿ, ಭಾರತಿ ಅವರಂಥ ಎಷ್ಟೋ ನಟಿಯರು ಮದುವೆ ಆದಮೇಲೆಯೂ ವೃತ್ತಿಬದುಕಿನ ಉತ್ತುಂಗದಲ್ಲಿದ್ದರು. ನಡುವೆ ಎಲ್ಲೋ ಕೆಲವು ಕಾಲ ಮದುವೆಯಾದರೆ ಬೇಡಿಕೆ ಕಡಿಮೆಯಾಗುವ ಸ್ಥಿತಿ ಬಂದಿತ್ತಷ್ಟೇ. ಈಗ ಮತ್ತೆ ಆ ಮನೋಧರ್ಮ ಬದಲಾಗುತ್ತಿದೆ. ನಟಿಯರನ್ನೇ ಗಮನದಲ್ಲಿಟ್ಟುಕೊಂಡು ಭಿನ್ನ ಬಗೆಯ ಪಾತ್ರಗಳನ್ನು ಬರೆಯುತ್ತಿದ್ದಾರೆ' ಎಂದು ಸಕಾರಾತ್ಮಕವಾಗಿಯೇ ಉತ್ತರಿಸುತ್ತಾರೆ ಮೇಘನಾ.

ತಮ್ಮ ನಿರ್ಮಾಣ ಸಂಸ್ಥೆಯ ಮೊದಲ ಸಿನಿಮಾ 'ಪುಟಾಣಿ ಪಂಟರ್ಸ್' ಆಗಿರುವುದರ ಕುರಿತು ಅವರಿಗೆ ಸಾಕಷ್ಟು ಖುಷಿಯಿದೆ. 'ನನಗೆ ಸಿನಿಮಾ ನಿರ್ಮಾಣ ಮಾಡಬೇಕು ಎಂಬ ಆಸೆ ಮೊದಲಿನಿಂದಲೂ ಇತ್ತು. ಆದರೆ ಮಕ್ಕಳ ಸಿನಿಮಾ ನಿರ್ಮಾಣ ಮಾಡಬೇಕು ಎಂದೇನೂ ಅಂದುಕೊಂಡಿರಲಿಲ್ಲ. ಹಾಗೆಯೇ ಈ ಸಿನಿಮಾವನ್ನು ನಾನು ಪ್ರಶಸ್ತಿಗಾಗಿ–ಸಬ್ಸಿಡಿಗಾಗಿಯೂ ಮಾಡುತ್ತಿಲ್ಲ. ಮಕ್ಕಳ ಸಿನಿಮಾ ಅಂದಾಕ್ಷಣ ನೀತಿಬೋಧೆ ಮಾಡಬೇಕು ಎಂಬ ಉದ್ದೇಶವೂ ನಮಗಿಲ್ಲ. ಪವನ್‌ಕುಮಾರ್ ಅವರು ಮಾಡಿಕೊಂಡ ಕಥೆ ತುಂಬ ಇಷ್ಟವಾಯ್ತು. ಇದು ಪಕ್ಕಾ ಕಮರ್ಷಿಯಲ್ ಸಿನಿಮಾ ಆಗಿರಬೇಕು ಎಂದು ಅವರಿಗೆ ಸ್ಪಷ್ಟವಾಗಿಯೇ ಹೇಳಿದ್ದೇನೆ. ಡ್ರಾಮಾ ಜ್ಯೂನಿಯರ್ಸ್ ನೋಡಿರುತ್ತೀರಲ್ಲ... ಅಲ್ಲಿ ನಕ್ಕು ನಗಿಸುವ ಹಾಸ್ಯದ ಜೊತೆಗೇ ಒಂದು ಸಾಮಾಜಿಕ ಸಂದೇಶವೂ ಇರುತ್ತದೆ. ಇದೂ ಅದೇ ಮಾದರಿಯ ಸಿನಿಮಾ' ಎಂದು ವಿವರಿಸುತ್ತಾರೆ ಮೇಘನಾ.

'ಇದು ನಾನು ಇಟ್ಟಿರುವ ಮೊದಲ ಪುಟ್ಟ ಹೆಜ್ಜೆ ಅಷ್ಟೆ' ಎನ್ನುವ ಅವರಿಗೆ ಮುಂದಿನ ದಿನಗಳಲ್ಲಿ ಬೇರೆ ಬೇರೆ ಬಗೆಯ ಸಿನಿಮಾಗಳನ್ನು ನಿರ್ಮಾಣ ಮಾಡುವ ಇರಾದೆಯೂ ಇದೆ. ಹೊಸ ಪ್ರತಿಭಾವಂತರ ಪ್ರಯೋಗಶೀಲ ಪ್ರಯತ್ನಕ್ಕೆ ಹಣ ಹೂಡುವ ಇಚ್ಛೆಯನ್ನೂ ಅವರು ವ್ಯಕ್ತಪಡಿಸುತ್ತಾರೆ.

ನಿರ್ದೇಶನದ ಆಸೆ ಇಲ್ಲವೇ? ಎಂದು ಕೇಳಿದರೆ 'ಆಸೆ ಇದೆ, ಆದರೆ ಆ ಪ್ರಬುದ್ಧತೆ ನನಗಿನ್ನೂ ಬಂದಿಲ್ಲ' ಎಂದು ಪ್ರಾಮಾಣಿಕವಾಗಿ ಹೇಳುತ್ತಾರೆ ಮೇಘನಾ. 'ನಿರ್ದೇಶನಕ್ಕೆ ತುಂಬ ತಿಳಿವಳಿಕೆ ಬೇಕು. ನನಗಿನ್ನೂ ಅಷ್ಟು ತಿಳಿವಳಿಕೆ ಬಂದಿಲ್ಲ. ಆಸೆಯಂತೂ ಇದೆ. ಮುಂದೆ ಏನಾಗುತ್ತದೆಯೋ ನೋಡಬೇಕು' ಎಂದು ಮನಸೊಳಗಿನ ಆಸೆಯ ದೀಪಕ್ಕೆ ತೈಲವನ್ನೆರೆಯುತ್ತಾರೆ. ■